adjudicationನಲ್ಲಿ ಅದು ಇದೆ, sub-judice ಆಗುತ್ತದೆ. ತಾವು ತೆಗೆದುಕೊಂಡಿರುವ ತೀರ್ಮಾನ ಸರಿ ಸ್ವಾಮಿ. ಬೇರೆ ರೀತಿಯಲ್ಲಿ ನೀವು ಚರ್ಚೆ ಮಾಡಿ ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ but, not in adjournment motion.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಉಪಾಧ್ಯಕ್ಷರೆ, ತೀರ್ಮಾನವನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ. ಏಕೆಂದರೆ, ಸರ್ಕಾರದಲ್ಲಿ ಇದು ದಂಧೆ ನಡೆಯುತ್ತಿರುವುದು. ಏಕೆಂದರೆ, ದಯಮಾಡಿ ಈ ವಿಷಯವನ್ನು ಇವತ್ತು ನಾವು 60ರಲ್ಲಿ ನಿಲುವಳಿ ಸೂಚನೆಗೆ ತಂದಿದ್ದೇವೆ. ಏಕೆಂದರೆ, ನಾವು ಇದನ್ನು ದಾಖಲಾತಿ ಸಮೇತ ready ಮಾಡಿದ್ದೇವೆ. ಏನು ಮಾಡಬೇಕೆಂದು ಹೇಳಿ.

ಉಪಾಧ್ಯಕ್ಷರು : ಈಗಾಗಲೇ ಮಾನ್ಯ ಸದಸ್ಯರುಗಳಾದ ಮಾನ್ಯ ಹೆಚ್.ಡಿ.ರೇವಣ್ಣನವರು ಮತ್ತು ಇತರರು ನಿಲುವಳಿ ಸೂಚನೆಯಲ್ಲಿ ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿಯ ಗ್ರಾಮಕ್ಕೆ ಸೇರಿದ 316.19ರ 120 ಎಕರೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಇದನ್ನು ನಿಲುವಳಿ ಸೂಚನೆಗೆ ಹೇಳಿದ್ದರು. ಈಗಾಗಲೇ ಆ ನಿಲುವಳಿ ಸೂಚನೆಯನ್ನು ತಿರಸ್ಕರಿಸಲಾಗಿದೆ. ಆದರೆ, ಇದು ಸಾರ್ವಜನಿಕ ಮಹತ್ವದ ವಿಷಯವೆಂದು ಇದನ್ನು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಾಗಿದೆ.

ಶ್ರೀ ಬಿ.ಎನ್.ಬಚ್ಚೇಗೌಡ : ಚರ್ಚೆ ಆಗಲಿ.

ಉಪಾಧ್ಯಕ್ಷರು : ಈಗ ನಿಯಮ 69ರ ಮೇಲೆ ಹೆಚ್.ಡಿ.ರೇವಣ್ಣನವರು ಮಾತನಾಡುತ್ತಾರೆ.

5. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ.

ವಿಷಯ : ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಆಡಳಿತ, ರಚನೆಯಲ್ಲಿ ಸರ್ಕಾರದ ಹಸ್ತಕ್ಷೇಪ ಹಾಗೂ ಕಾನೂನು ಬಾಹಿರವಾಗಿ ಕೆಲಸ ಮಾಡುತ್ತಿರುವ ಕೆಲವು ಸಹಕಾರ ಸಂಘಗಳ ಮೇಲೆ ಕ್ರಮ ಕೈಗೊಳ್ಳದೆ ತಾರತಮ್ಯ ಧೋರಣೆ ಅನುಸರಿಸುತ್ತಿರುವ ವಿಚಾರದಲ್ಲಿ ನೀಡಿರುವ ಸೂಚನೆಯ ಬಗ್ಗೆ ಚರ್ಚೆ.